**ಹಿಂದೀ ಮೂಲ: ಪ್ರೊ. ರಾಮ ದಲಾಲ**
**ಕನ್ನಡಕ್ಕೆ: ಎಂ.ಸಿ. ಅಂಟಿನ**

'ಟಿಂಗ್ ಟಾಂಗ, ಟಿಂಗ್ ಟಾಂಗ್' ಬಾಗಿಲ ಬೆಲ್ ಬಾರಿಸಿತು.

ಸುಷ್ಮಾ ಗಾಬರಿಗೊಂಡು ಕಿಚನ್‌ನಿಂದ ಹೊರಗೆ ಬಂದಳು.

"ನೋಡಿದಿರಾ, ನಿಮ್ಮ ಗೆಳೆಯ ಬಂದೇಬಿಟ್ಟರು. ಈಗ ನಾನೇನು ಮಾಡಲಿ? ಮನೆಯಲ್ಲಿ ಸ್ಟೌ ಹಚ್ಚಲು ಚಿಮಣಿಎಣ್ಣೆ ಇಲ್ಲ. ಚಹಾ ಮಾಡಲು ಹಾಲು ಕೂಡಾ ಇಲ್ಲ..." ಎಂದಳು ಸುಷ್ಮಾ. ಅವಳ ಮುಖದ ಮೇಲೆ ಟೆನ್ಶನ್ ಆವರಿಸಿತ್ತು.

ವಾಸ್ತವವಾಗಿ ನಾವು ನಿನ್ನೆಯಷ್ಟೇ ಕಲ್ಯಾಣದಿಂದ ಬಾಂದ್ರಾಕ್ಕೆ ಶಿಫ್ಟ್ ಆಗಿದ್ದೆವು. ದೊಡ್ಡ ದೊಡ್ಡ ಬಾಕ್ಸುಗಳಲ್ಲಿ ಪ್ಯಾಕ್‌ಮಾಡಿ ತಂದ ಸಾಮಾನುಗಳನ್ನು ಒಂದು ರೂಮಿನಲ್ಲಿ ತುಂಬಿ ಇಟ್ಟಿದ್ದೆವು. ಎರಡನೆಯ ರೂಮಿನಲ್ಲಿ ತಂದೆಯವರು ಅನಾರೋಗ್ಯದಿಂದ ಮಲಗಿದ್ದರು. ಇಂಥದರಲ್ಲಿ ನಿನ್ನೆ ಸಾಯಂಕಾಲ ಎದುರಿನ ಬೀದಿಯಲ್ಲಿ ಅಕಸ್ಮಾತ್ತಾಗಿ ನನ್ನ ಹಳೆಯ ಸಹೋದ್ಯೋಗಿ ವಸಂತ ಲೋಣಕರ ಭೇಟಿಯಾದ. ನಾನು ಬಾಂದ್ರಾಕ್ಕೆ ಬಂದುದನ್ನು ತಿಳಿದು ಆತ ಬಹಳ ಸಂತೋಷಪಟ್ಟ.

"ನೀನು ನಿನ್ನ ವಿಳಾಸವನ್ನು ನನಗೆ ಕೊಟ್ಟಿರು. ನಾಳೆ ನಾನು ನಿನ್ನನ್ನು ಭೇಟಿಯಾಗಲು ಬಂದೇ ಬರುತ್ತೇನೆ. ನಿನ್ನನ್ನು ಇಲ್ಲಿ ಕಂಡು ನನಗೆ ಅಪಾರ ಆನಂದವಾಗಿದೆ" ಎಂದ ವಸಂತ.

ಆದರೆ ಸುಷ್ಮಾ ಬೇಸರಪಟ್ಟುಕೊಂಡಳು.

"ಹೊರಗಡೆ ಹೋಗಿ ಸ್ವಲ್ಪ ಚಿಮಣಿಎಣ್ಣೆ ಮತ್ತು ಹಾಲು ತನ್ನಿರಿ. ಇಲ್ಲದೆ ಹೋದರೆ ನಾನು ಚಹಾ ಕೂಡ ಮಾಡಿಕೊಡಲಾಗದ ಸ್ಥಿತಿಯಲ್ಲಿದ್ದೇನೆ" ಎಂದಳು.

ಹೊರಗೆ ಹುಡುಗನೊಬ್ಬ ಪತ್ರಿಕೆಮಾರಲು ಬಂದಿದ್ದ. ನಾನು ಅವನಿಂದ ಪತ್ರಿಕೆಯನ್ನು ಖರೀದಿಸಿ, "ಸ್ವಲ್ಪ ಹೆಡ್‌ಲೈನ್ ಮೇಲೆ ಕಣ್ಣಾಡಿಸಿ ನಾನು ಹೊರಗೆ ಹೋಗುತ್ತೇನೆ" ಎಂದು ಸುಷ್ಮಾಳಿಗೆ ಹೇಳಿದೆ.

ಅಷ್ಟರಲ್ಲಿ ಬಾಗಿಲ ಬೆಲ್ ಬಾರಿಸಿತು. ಕೂಡಲೇ ಸುಷ್ಮಾ ಗಾಬರಿಗೊಂಡು ಕಿಚನ್‌ನಿಂದ ಹೊರಗೆ ಬಂದಳು.

ನಾನು ಪೇಪರನ್ನು ಕೋಚ್ ಮೇಲೆಸೆದು ಎದ್ದು ಬಾಗಿಲಿನತ್ತ ಹೆಜ್ಜೆ ಹಾಕಿದೆ. ಬಾಗಿಲು ತೆರೆದು ಹೊರಗೆ ಇಣುಕಿದೆ. ಹೊರಗೆ ಗಿಡ್ಡಗಿನ ವ್ಯಕ್ತಿಯೊಬ್ಬ ನಿಂತಿದ್ದ. ಅವನ ಶರೀರ ಪೈಲವಾನನಂತಿತ್ತು. "ನೆರೆಮನೆಯ ಮಮತಾ ಅವರು ನಿಮಗೆ ಚಿಮಣಿಎಣ್ಣೆಯ ಅವಶ್ಯಕತೆ ಇದ್ದ ಬಗ್ಗೆ ಹೇಳುತ್ತಿದ್ದರು" ಆತ ಅಂದ.